ಸಿ.ಸಿ 19/2024

ಪಿ.ಡಬ್ಲ್ಯೂ-1.

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 12-11-2024.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಂ ಎಂ., ವಕೀಲರಿಂದಃ**

ನಮ್ಮದು ಉಸುಕು, ಎಂ ಸ್ಯಾಂಡ ಸಪ್ಲೇ ಮಾಡುವ ಬ್ಯುಸಿನೆಸ್ ಇರುತ್ತದೆ. ವಾರ್ಷಿಕವಾಗಿ ನಾನು ಸುಮಾರು 15 ರಿಂದ 20 ಲಕ್ಷ ರೂಪಾಯಿಗಳ ವ್ಯವಹಾರ ಮಾಡುತ್ತೇನೆ. ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ನಾನು ಆದಾಯ ತೆರಿಗೆಯನ್ನು ಪಾವತಿಸುವುದಿಲ್ಲ. ಆರೋಪಿ ನನಗೆ 2018 ರಿಂದ ಪರಿಚಯ.ನಮ್ಮ ಮಧ್ಯೆ ಈ ಹಿಂದೆಯೂ ವ್ಯವಹಾರ ಇತ್ತು. ಆರೋಪಿ ಸರಿಯಾರಿ ವ್ಯವಹಾರ ಮಾಡಿರುತ್ತಾನೆ. ಆರೋಪಿಗೆ ನಾನು ಎಂ ಸ್ಯಾಂಡ್ ಸಪ್ಲೇ ಮಾಡಿರುತ್ತೇನೆ. ಆರೋಪಿಗೆ ಸಂಬಂಧಿಸಿದ ಬ್ಯುಸಿನೆಸ್ ಇದ್ದು, ಅವರ ಬಳಿ ಒಂದು ಟ್ರ್ಯಾಕ್ಟರ್ ಇದೆ. ಆರೋಪಿ ಕೂಲಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ. ಆರೋಪಿ ಅನಕ್ಷರಸ್ಥ ಇದ್ದು, ಅವನಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಇರಬಹುದು. ನಾನು ಆರೋಪಿಯ ಮನೆಗೆ ಹೋದಾಗ ಆರೋಪಿಯು ದಿಃ 15-07-2023 ರಂದು ತನ್ನ ಬಳಿ ದುಡ್ಡಿಲ್ಲ ಎಂದು ತನಗೆ ಚೆಕ್ಕನ್ನು ಕೊಟ್ಟಿರುತ್ತಾನೆ. ಸದರಿ ಚೆಕ್ಕಿನ ನಂಬರ್ ಹೇಳಬಹುದೆ ಎಂದರೆ 197889 ಎಂದು ನುಡಿಯುತ್ತಾರೆ. ಚೆಕ್ಕು ಮೇಲೆ ಇರುವ ಬರವಣಿಗೆ ಯಾರದ್ದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಆರೋಪಿಯೇ ಆ ಚೆಕ್ಕನ್ನು ನೀಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಚೆಕ್ಕಿನ ಮೇಲೆ ಇರುವ ಬರವಣಿಗೆ ನನ್ನದೇ ಆಗಿರುತ್ತದೆ, ಸದರಿ ಚೆಕ್ಕನ್ನು ನಾನೇ ತುಂಬಿ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲಿರುವ ಬರವಣಿಗೆಗೂ ಮತ್ತು ಚೆಕ್ಕಿನ ಮೇಲೆ ಕಾಣುವ ಆರೋಪಿಯ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿ. ಚೆಕ್ಕಿನ ಮೇಲೆ ಇರುವ ಬರವಣಿಗೆ ನನ್ನದೋ ಅಥವಾ ಆರೋಪಿಯದ್ದೋ ಎಂದು ತಿಳಿದುಕೊಳ್ಳಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ನನ್ನದೇನು ಅಭ್ಯಂತರ ಇಲ್ಲ ಎಂದರೆ ಸರಿ. ದಿಃ 25-08-2023 ರಂದು ನಾನು ನಮ್ಮ ವಕೀಲರನ್ನು ಭೇಟಿಯಾಗಿ ಆರೋಪಿಗೆ ನೋಟೀಸನ್ನು ಕಳುಹಿಸಿರುತ್ತೇನೆ. ನಿಪಿ1(ಎ) ಆರೋಪಿಯ ಸಹಿ ಆಗಿರಬಹುದು ನನಗೆ ಗೊತ್ತಿಲ್ಲ, ನಾನು ಅವರ ಮನೆಗೆ ಹೋದಾಗ ಸದರಿ ಚೆಕ್ಕನ್ನು ನನಗೆ ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ನಿಪಿ1(ಎ) ಮತ್ತು ನಿಪಿ5 ರಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ5 ರಲ್ಲಿರುವ ಸಹಿ

ಆರೋಪಿಯದ್ದಾಗಿರುವುದಿಲ್ಲ ಎಂದರೆ ಇರಬಹುದು ನಾನು ನೋಡಿರುವುದಿಲ್ಲ. ನಾನು ಆರೋಪಿಗೆ ಕಳುಹಿಸಿದ ನೋಟೀಸು ಅವನಿಗೆ ಜಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ಈ ಫಿರ್ಯಾದನ್ನು ದಾಖಲು ಮಾಡುವ ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ನ್ಯಾಯಾಲಯದಲ್ಲಿ ಸಮಾರು 2 ರಿಂದ 3 ಫಿರ್ಯಾದನ್ನು ದಾಖಲಿಸಿರುತ್ತೇನೆ. ಆರೋಪಿ ನನ್ನೊಂದಿಗೆ ಕಡಿ ಉಸುಕಿಗೆ ಸಂಬಂದಿಸಿದಂತೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮುಂಡಗೋಡಿನ ಶ್ರೀರಾಮ್ ಫೈನಾನ್ಸನಲ್ಲಿ ಚೇತನ್ ಎಂಬ ಸ್ನೇಹಿತನಿದ್ದಾನೆ ಎಂದರೆ ಇಲ್ಲ. ಆರೋಪಿಯು ಶ್ರೀರಾಮ್ ಫೈನಾನ್ಸನಲ್ಲಿ ದ್ವಿಚಕ್ರ ವಾಹನ ಖರೀದಿ ಮಾಡುವ ಸಲುವಾಗಿ ಸಾಲ ಪಡೆದುಕೊಂಡಿದ್ದು ಸದರಿ ಸಾಲ ಪಡೆದುಕೊಳ್ಳುವ ಸಮಯಕ್ಕೆ ತನ್ನ ನಾಲ್ಕು ಕೆನರಾ ಬ್ಯಾಂಕ್ ಚೆಕ್ಕುಗಳನ್ನು ಕೊಟ್ಟಿದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಲ್ಕು ಚೆಕ್ಕುಗಳಲ್ಲಿ ನನ್ನ ಗೆಳೆಯನಾದ ಚೇತನ್ ರವರಿಂದ ನಾನು ಒಂದು ಚೆಕ್ಕನ್ನು ಪಡೆದುಕೊಂಡು ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಲೇವಾದೇವಿ ವ್ಯಾಪಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಜನರಿಗೆ ಸಾಲವನ್ನು ಕೊಟ್ಟು ಹೆಚ್ಚಿನ ಬಡ್ಡಿಯನ್ನು ಪಡೆಯುತ್ತೇನೆ ಎಂದರೆ ಸರಿಯಲ್ಲ. ನಾನು ಕಡಿ ಎಂ ಸ್ಯಾಂಡ್ ಮಾರಾಟ ಮಾಡಲು ಲೈಸನ್ಸನ್ನು ಪಡೆದುಕೊಂಡಿರುತ್ತೇನೆ. ಸದರಿ ಲೈಸೆನ್ಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಲೈಸೆನ್ಸ ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ನನಗೆ ಅನೇಕ ಬಾರಿ ಹಣ ಕೊಡುತ್ತೇನೆ ಕೊಡುತ್ತೇನೆ ಎಂದು ಹೇಳಿರುತ್ತಾನೆ ಎಂದು ನಾನು ಹೇಳಿದ್ದು, ಆ ಬಗ್ಗೆ ನಾನು ಅವನ ನಂಬರಿಗೆ ಸಂಬಂಧಿಸಿದ ಸಿ ಡಿ ಆರ್ ಏನಾದರೂ ಪಡೆದುಕೊಂಡಿದ್ದೇನೆಯೋ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಬಳಿ 25 ಸಾವಿರ ರೂಪಾಯಿಗಳ ಸಾಲವನ್ನು ಪಡೆದುಕೊಂಡಿದ್ದು, ಅದನ್ನು ಬಡ್ಡಿ ಸಮೇತ ತೀರಿಸಿರುತ್ತಾನೆ, ಆದರೂ ಸಹ ಅವನಿಗೆ ಸಂಬಂಧಿಸಿದ ಚೆಕ್ಕನ್ನು ಪಡೆದುಕೊಂಡು ನಾನು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

-Sd-

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಮುಂಡಗೋಡ.